ದಿನಾಂಕ. 25-08-2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣಿ ಕರಿಸಲಾಯಿತು.

**ಮುಂದುವರಿದ ಪಾಟಿ ಸವಾಲುಃ** ಆರೋಪಿ ಪರ ಶ್ರೀ ಎನ್.ಆರ್.ಎನ್ ವಕೀಲರಿಂದಃ

14. ನಾನು ನನ್ನ ಫಿರ್ಯಾದಿಯಲ್ಲಿ ಆರೋಪಿಗೆ ಕೊಡಲು 9 ಲಕ್ಷ ಹಣದಲ್ಲಿ ಎಷ್ಟೆಷ್ಟು ನೋಟುಗಳ ಕಟ್ಟುಗಳು ಇದ್ದವು ಎಂದು ಬರೆಸಿಲ್ಲ. ನನ್ನ ಫಿರ್ಯಾದಿಯಲ್ಲಿ ಆ 9 ಲಕ್ಷ ಹಣ 2-3 ದಿನಗಳ ಹಿಂದೆ ಎಲ್ಲಿಂದ ಬಂತು ಎಂದು ಹೇಳಿಲ್ಲ. ನಾನು ಭೂ ಸ್ವಾಧೀನದ ಪರಿಹಾರದಿಂದ ಪಡೆದುಕೊಂಡೆ ಎಂದು ಹೇಳುವ ಹಣ ರೂ.2,68,000/- ಇರಬೇಕು, ಆದರೆ ಈಗ ಸ್ಪಷ್ಟವಾಗಿ ಹೇಳಲು ಆಗುತ್ತಿಲ್ಲ. ನಾನು ಆ ಪರಿಹಾರಕ್ಕೆ ಸಂಬಂಧಪಟ್ಟಂತ ದಾಖಲೆಗಳನ್ನು ನೋಡಿಕೊಂಡು ಬಂದಿದ್ದೇನೆ. ಆ ಪರಿಹಾರದ ಹಣವನ್ನು 2013-14 ನೇ ಸಾಲಿನಲ್ಲಿ ಇರಬಹುದು, ಅದರೆ ಸ್ಪಷ್ಟವಾಗಿ ನೆನಪಿಲ್ಲ.

15. ನನ್ನ ಮಕ್ಕಳು ವಿಧ್ಯಾಭ್ಯಾಸ ಮಾಡುತ್ತಿದ್ದಾರೆ ಹಾಗೂ ಅದಕ್ಕೆ ಖರ್ಚಾಗುತ್ತದೆ ಎಂದರೆ ಸರಿ. ಸಾಕ್ಷಿ ಸ್ವತಃ ಅವರು ಸರಕಾರಿ ಶಾಲೆಯಲ್ಲಿ ಓದುತ್ತಿರುವುದು ಎಂದು ನುಡಿಯುತ್ತಾರೆ. ನಾನು ಸ್ವಂತ ದುಡಿಮೆಯಿಂದ ಹಣ ಸಂಪಾದಿಸುತ್ತಿದ್ದೇನೆ ಎಂದು ತೋರಿಸುವ ದಾಖಲೆ ಹಾಜರು ಪಡಿಸಿಲ್ಲ ಎಂದರೆ ಸರಿ. ನಾನು ಬ್ಯುಸನೆಸ್ ಮಾಡುತ್ತೇನೆ ಎಂದು ತೋರಿಸಲು ಯಾವುದೆ ದಾಖಲೆ ಹಾಜರು ಪಡಿಸಿಲ್ಲ ಎಂದರೆ ಸರಿ. ನಾನು ಬ್ಯುಸನೆಸ್ ಮಾಡುತ್ತಿದ್ದೇನೆ ಎಂದು ತೋರಿಸಲು ನನ್ನ ಹತ್ತಿರ ಲೈಸನ್ಸ ಇಲ್ಲ ಎಂದರೆ ಸರಿ. ಬ್ಯುಸನೆಸ್ ಮಾಡುತ್ತಿದ್ದೇನೆ ಎಂದು ತೋರಿಸಲು ಬೇರೆ ದಾಖಲೆಗಳು ನನ್ನ ಬಳಿ ಇಲ್ಲ ಎಂದರೆ ಸರಿ.

16. ಆರೋಪಿಯ ಮನೆ ನನ್ನ ಮನೆಯಿಂದ 700 ರಿಂದ 800 ಕಿ ಮೀ ದೂರದಲ್ಲಿ ಇದೆ ಎಂದರೆ ಸರಿ. ನಾನು ಆರೋಪಿ ನನ್ನ ಮನೆಗೆ ಇಂತಹ ದಿನ ಬಂದರು ಎಂದು ಬರೆಸಿಲ್ಲ ಎಂದರೆ ಸರಿ.

ನನ್ನ ಮುಖ್ಯ ವಿಚಾರಣಾ ಪ್ಯಾರ 1 ರಲ್ಲಿ ಲೈನ್ 15 ರಲ್ಲಿ ಹೇಳಿರುವ ಶಬ್ದ "ಇಂಟಿಮೆಷನ್" ಅಂದರೆ ಎನು ಇಂಟಿಮೆಷನ್ ಎಂದರೆ ಸಾಕ್ಷಿ ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ. ಆ ಇಂಟಿಮೆಷನ್ ನಾನೆ ಹೋಗಿ ಕೊಟ್ಟಿದ್ದೆ. ಆ ಇಂಟಿಮೇಷನ್ ನ್ನು ನಾನು ದಿನಾಂಕ 28-02-2017 ರ ಮೊದಲೆನೂ ಕೊಟ್ಟಿರುತ್ತೇನೆ. ಅದು ಯಾವ ದಿನಾಂಕದಂದು ಕೊಟ್ಟಿದ್ದೀರಿ ಎಂದರೆ ಸಾಕ್ಷಿ ಆ ದಿನ ದಿನಾಂಕ 28-02-2017 ನಂತರನೂ ಕೊಟ್ಟಿರಬಹುದು, ಆದರೆ ನನಗೆ ಸರಿಯಾಗಿ ನೆನಪಿಲ್ಲ ಎಂದು ನುಡಿಯುತ್ತಾರೆ. ಆ ಇಂಟಿಮೆಷನ್ ಜಾಬ್‌ನ ವಿಷಯಕ್ಕೆ ಕೊಟ್ಟಿರುವುದು. ಜಾಬ್‌ಗಾಗಿ ಹಣ ಕೊಡುವುದು ಅಪರಾಧ ಎಂದರೆ ಸಾಕ್ಷಿ ತಪ್ಪು ಹೌದು ಎಂದು ನುಡಿಯುತ್ತಾರೆ. ಜಾಬ್ ಗಾಗಿ ನಾನು ಆರೋಪಿಗೆ ಹಣ ಕೊಟ್ಟಿದ್ದೆ ಹಾಗೂ ಆರೋಪಿ ಜಾಬ್ ಕೊಡಿಸುತ್ತೇನೆ ಎಂದು ಆಶ್ವಾಸನೆ ಕೊಟ್ಟಿದ್ದಾರೆ ಎನ್ನುವುದು ಕಾನೂನಾತ್ಮಕ ವ್ಯವಹಾರ ಅಲ್ಲ ಎಂದರೆ ಸಾಕ್ಷಿ ಇರಬಹುದು, ಆದರೆ ನಾನು ಹಣ ಕೊಟ್ಟಿದ್ದೇನೆ ಎಂದು ನುಡಿಯುತ್ತಾರೆ.

17. ನನಗೆ 9 ಲಕ್ಷ ಹಣ ಕೊಡಲು ಸಾಮರ್ಥ್ಯ ಇರಲಿಲ್ಲ ಎಂದರೆ ಸಾಕ್ಷಿ ನನಗೆ ಎರಡು ಸಾರಿ ಪರಿಹಾರದ ಹಣ ಬಂದಿದ್ದರಲ್ಲಿ ಹಾಗೂ ಕೈ ಸಾಲ ಹಾಗೂ ಬ್ಯಾಂಕಿನಿಂದ ಸಾಲ ಪಡೆದುಕೊಂಡು ಕೊಟ್ಟಿದ್ದೇನೆ ಎಂದು ನುಡಿಯುತ್ತಾರೆ. ನಾನು ಹಣವನ್ನು ಯಾವ ವರ್ಷದಿಂದ ಕೂಡಿಟ್ಟಿದ್ದೀರಿ ಎಂದರೆ ಸಾಕ್ಷಿ 2011 ರಲ್ಲಿ ರೂ.68,000/- ಹಾಗೂ 2013 ರಲ್ಲಿ ರೂ.2,68,000/- ಪರಿಹಾರದ ಹಣ ಹಾಗೂ ನನ್ನ ಅಣ್ಣನ ಮಗನಿಂದ ರೂ.3,00,000/- ಪಡೆದಿದ್ದೆ ಹಾಗೂ ಒಟ್ಟು ರೂ.6,00,000/- ನನ್ನದು ಹಾಗೂ ರೂ.3,00,000/- ಕೈ ಸಾಲ ಸೇರಿಸಿ ಆರೋಪಿಗೆ ಕೊಟ್ಟಿದ್ದೆ ಎಂದು ನುಡಿಯುತ್ತಾರೆ. ಆ 3 ಲಕ್ಷ ನನ್ನ ಅಣ್ಣನ ಮಗನಿಂದ ಜಾಬ್ ಗೆ ಕೊಡಲಿಕ್ಕೆ ಪಡೆದುಕೊಂಡಿರುವುದು.

ಅಣ್ಣನ ಮಗನ ಹೆಸರು ನನ್ನ ಫಿರ್ಯಾದಿಯಲ್ಲಿ ಹೇಳಿರುವ ಮನೋಜ ಮುರಾರಿ ನಾಯ್ಕ. ಆತನಿಗೆ ಉದ್ಯೋಗಕ್ಕಾಗಿ ಅವನಿಂದ ರೂ.3 ಲಕ್ಷ ಪಡೆದುಕೊಂಡು ನಾನು ಆರೋಪಿಗೆ ಕೊಟ್ಟಿರುವುದು. ಆತ ಆ ಸಮಯದಲ್ಲಿ ನಿರುದ್ಯೋಗಿ ಎಂದರೆ ಸರಿ. ಸಾಕ್ಷಿ ಸ್ವತಃ ಅವರಿಗೆ ಹಣ ಬಂದಿತ್ತು ಎಂದು ನುಡಿಯುತ್ತಾರೆ. ಅವರಿಗೆ ಹಣ ಬಂದಿತ್ತು ಎಂದು ತೋರಿಸಲು ದಾಖಲೆ ಇದೆ.

18. ಆರೋಪಿ ನನ್ನ ಮಕ್ಕಳಿಗೆ ಹಾಗೂ ನನ್ನ ಅಣ್ಣನ ಮಗನಿಗೆ ಉದ್ಯೋಗ ಕೊಡಿಸುತ್ತೇನೆ ಎಂದು ಆಶ್ವಾಸನೆ ಕೊಟ್ಟದ್ದೆ ಇಲ್ಲ ಹಾಗೂ ನನ್ನ ಹಾಗೂ ಆರೋಪಿ ನಡುವೆ ಯಾವುದೆ ವ್ಯವಹಾರ ಆ ಬಾಪ್ತು ನಡೆದದ್ದೆ ಇಲ್ಲ ಎಂದರೆ ಸರಿಯಲ್ಲ. ಆರೋಪಿಗೆ ನಾನು ಯಾರು ಎಂದು ಪರಿಚಯನೆ ಇಲ್ಲ ಎಂದರೆ ಸರಿಯಲ್ಲ. ನಾನು ಯಾವ ಕಾಲಕ್ಕೂ ಆರೋಪಿಯನ್ನು ಭೇಟಿಯಾದದ್ದು ಇಲ್ಲ ಎಂದರೆ ಸರಿಯಲ್ಲ. ಉದ್ಯೋಗವನ್ನು ಕೊಡಿಸುತ್ತೇನೆ ಎಂದು ಆಶ್ವಾಸನೆ ಕೊಟ್ಟಿದ್ದಾನೆ ಎಂದು ಹೇಳುವ ವ್ಯವಹಾರ ಕಾನೂನಾತ್ಮಕ ವ್ಯವಹಾರ ಅಲ್ಲ ಎಂದು ಗೊತ್ತಿದ್ದರು ಕೂಡ ಸುಳ್ಳು ಫಿರ್ಯಾದಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

19. ಆರೋಪಿ ಕೊಟ್ಟಿದ್ದಾರೆ ಎಂದು ಹೇಳುವ ಚೆಕ್ ನ ನಂಬರ 129518 ಆಗಿರುತ್ತದೆ. ನಾನು ಚೆಕ್ ನಗದೀಕರಣಗೊಳ್ಳದೆ ವಾಪಸಾದ ನಂತರ ನನ್ನ ಬ್ಯಾಂಕಿಗೆ ಹೋಗಿ ಆ ಚೆಕ್ ಯಾರಿಗೆ ಸಂಬಂಧಪಟ್ಟದ್ದು ಎಂದು ವಿಚಾರಣೆ ಮಾಡಿದ್ದೇನೆ ಎಂದು ನನಗೆ ನೆನಪಿಲ್ಲ. ನಾನು ನನ್ನ ಫಿರ್ಯಾದಿಯಲ್ಲಿ ಆ ಚೆಕ್‌ನ್ನು ಅಂಕೋಲಾ ಶಾಖೆಯ ಕಾರ್ಪೊರೇಷನ ಬ್ಯಾಂಕಿಗೆ ಸಲ್ಲಿಸಿದ್ದೆ ಎಂದು ಹೇಳಿದ್ದೇನೆ. ಕಾರ್ಪೊರೇಷನ ಬ್ಯಾಂಕಿಗೆ ಹಾಜರು ಪಡಿಸಿದ್ದ ಬಗ್ಗೆ ರಶೀದಿಯನ್ನು ಹಾಜರು ಪಡಿಸಿದ್ದೇನೆ. ನಾನು ಹಾಜರು ಪಡಿಸಿದ ದಾಖಲೆಗಳನ್ನು ನೋಡಿ ಆ ರೀತಿ ಕಾರ್ಪೊರೆಷನ್ ಬ್ಯಾಂಕಿಗೆ ಹಾಜರು

ಪಡಿಸಿದ ಬಗ್ಗೆ ದಾಖಲೆಯನ್ನು ತೋರಿಸಬಹುದು. ಸಾಕ್ಷಿಗೆ ದಾಖಲೆಗಳನ್ನು ತೋರಿಸಿದಾಗ ನನಗೆ ಓದಲು ಬರದೆ ಇರುವುದರಿಂದ ತೋರಿಸಲು ಆಗುತ್ತಿಲ್ಲ ಎಂದು ನುಡಿಯುತ್ತಾರೆ. ನಾನು 3 ನೇ ತರಗತಿ ತನಕ ಓದಿರುತ್ತೇನೆ.

20. ಫಿರ್ಯಾದಿಯಲ್ಲಿರುವ ಸಹಿ ನನ್ನದೆ ಸಹಿ. ನಾನು ಇಂಗ್ಲೀಷ ಭಾಷೆಯಲ್ಲಿ ಮೊಡಿ ಅಕ್ಷರದಲ್ಲಿ ಸಹಿ ಮಾಡಿದ್ದೇನೆ ಎಂದರೆ ಸಾಕ್ಷಿ ಸಾಕ್ಷರತೆ ಬಂದ ನಂತರ ಕಲಿತು ಸಹಿ ಮಾಡಿದ್ದೆ ಎಂದು ನುಡಿಯುತ್ತಾರೆ. ಸಾಕ್ಷರತೆ ಕಲಿಕೆಯಲ್ಲಿ ಇಂಗ್ಲಿಷ ಮತ್ತು ಕನ್ನಡ ಭಾಷೆಯನ್ನು ಕಲಿತಿದ್ದೇನೆ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಬರಿ ಇಂಗ್ಲಿಷ ಭಾಷೆಯಲ್ಲಿ ಸಹಿ ಮಾಡುವುದನ್ನು ಕಲಿತಿದ್ದೇನೆ. 3 ನೇ ತರಗತಿ ತನಕ ವ್ಯಾಸಂಗ ಮಾಡಿದವರಿಗೆ ಕನ್ನಡ ಓದಲು ಬರೆಯಲು ಸಾಮಾನ್ಯವಾಗಿ ಬರುತ್ತದೆ ಎಂದರೆ ಸರಿ. ನನಗೆ ಓದಲು ಮತ್ತು ಬರೆಯಲು ಬರುತ್ತಿದ್ದರು ಕೂಡ ಈಗ ದಾಖಲಾತಿ ತೋರಿಸಿಕೊಡಲು ಹೇಳಿದಾಗ ಬರುತ್ತಿಲ್ಲ ಎಂದು ಸುಳ್ಳು ಹೇಳಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿ ಕೊಟ್ಟರು ಎಂದು ಹೇಳುವ ಚಕ್‌ನ್ನು ನಾನು ಕಾರ್ಪೊರೇಷನ್ ಬ್ಯಾಂಕಿಗೆ ಹಾಜರು ಪಡಿಸಿದ್ದೆ ಇಲ್ಲ ಹಾಗೂ ಅವರು ನಾನು ಹೇಳುವಂತ ರಶೀದಿ ಕೊಟ್ಟದ್ದೆ ಇಲ್ಲ ಎಂದರೆ ಸರಿಯಲ್ಲ.

21. ನಾನು ಹೇಳುವಂತ ಚಕ್ ಯಾರಿಗೆ ಸಂಬಂಧಪಟ್ಟದ್ದು ಎಂದು ಈ ಫಿರ್ಯಾದಿ ಸಲ್ಲಿಸಿದ ನಂತರ ಕೂಡ ನಾನು ತಿಳಿದುಕೊಂಡದ್ದು ಇಲ್ಲ ಎಂದರೆ ಸಾಕ್ಷಿ ನೆನಪಿಲ್ಲ ಎಂದು ನುಡಿಯುತ್ತಾರೆ. ನಾನು ಹೇಳುವಂತ ಚಕ್‌ನ್ನು ಆರೋಪಿ ನನಗೆ ನೀಡಿದ್ದೆ ಇಲ್ಲ ಹಾಗೂ ನಾನು ಹಾಜರು ಪಡಿಸಿದ ಚಕ್‌ನಲ್ಲಿರುವ ಸಹಿ ಆರೋಪಿಯ ಸಹಿ ಅಲ್ಲ ಎಂದರೆ ಸರಿಯಲ್ಲ. ಆ ಚಕ್ ಆರೋಪಿಗೆ ಸಂಬಂಧಪಡದೆ

ಇದ್ದುದರಿಂದ ನಾನು ಕೊಟ್ಟ ಎಂದು ಹೇಳುವ ನೋಟಿಸಿಗೆ ಆರೋಪಿ ಉತ್ತರ ಕೊಡುವ ಪ್ರಮಯವೆ ಬಂದಿಲ್ಲ ಎಂದರೆ ಸರಿಯಲ್ಲ.

22. ನಾನು ಆದಾಯ ತೆರಿಗೆ ರಿರ್ಟನ್ಸ ನಾನು ಸಲ್ಲಿಸಿಲ್ಲ ಎಂದರೆ ಸರಿ. ನಾನು ಆದಾಯ ತೆರಿಗೆ ಪಾವತಿದಾರಳು ಎಂದು ನನ್ನ ಫಿರ್ಯಾದಿಯಲ್ಲಿ ಹೇಳಿಲ್ಲ ಎಂದರೆ ಸರಿ. ಸಾಮಾನ್ಯವಾಗಿ ಬ್ಯುಸನೆಸ್ ಮಾಡುವವರಿಗೆ ಜಿ ಎಸ್ ಟಿ ನಂಬರ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಆ ರೀತಿಯ ಜಿ ಎಸ್ ಟಿ ನಂಬರನ್ನು ನಾನು ಹೊಂದಿಲ್ಲ ಎಂದರೆ ಸರಿ.

( ಶ್ರೀ ಎನ್.ಆರ್.ಎನ್ ವಕೀಲರ ವಿನಂತಿಯ ಮೇರೆಗೆ ಮುಂದುವರಿದ ಪಾಟಿ ಸವಾಲನ್ನು ಮುಂದುಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಇದೆ.

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಅಂಕೋಲಾ.